# ನಿಮ್ಮೊಡನೆ

## ಯುವಕರ ಕನಸುಗಳಿಗೆ ಕೊಳ್ಳಿಯಿಟ್ಟ ಕೆಪಿಎಸ್‌ಸಿ

ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಒಬ್ಬೊಬ್ಬರ ಗ್ರಹಿಕೆಗೆ ಒಂದೊಂದು ರೀತಿಯಾಗಿ ನಿಲುಕುವಂತಹ ಒಂದು ಸ್ವಾಯತ್ತ ಸಂಸ್ಥೆ. ಕೆಲವರ ಕಣ್ಣಲ್ಲಿ ಅದೊಂದು ಯಃಕಶ್ಚಿತ್ ನೇಮಕಾತಿ ಪ್ರಾಧಿಕಾರ. ಇನ್ನು ಕೆಲವರ ಪಾಲಿಗೆ ಸರ್ಕಾರಿ ಉದ್ಯೋಗಗಳನ್ನು ಬಿಕರಿಗೆ ಇಟ್ಟಿರುವ ಹರಾಜುಕಟ್ಟೆ. ಮತ್ತೂ ಕೆಲವರಿಗೆ ಅದೊಂದು ವಿವಾಹ ವೇದಿಕೆ.

ಕೆಪಿಎಸ್‌ಸಿ ಮಟ್ಟಿಗೆ ಈ ಎಲ್ಲವೂ ನಿಜ. ನಮ್ಮನ್ನು ಆಳಿದ ರಾಜಕೀಯ ಪಕ್ಷಗಳು ಮತ್ತು ಅವುಗಳ ಮುಂದಾಳುಗಳು ಅದು ಈ ಹಂತಕ್ಕೆ ಕುಗ್ಗಲು ಬೇಕಾದ ಸಕಲವನ್ನೂ ಮಾಡಿದ್ದಾರೆ, ಮಾಡುತ್ತಲೇ ಇದ್ದಾರೆ. ಈ ಸಂಸ್ಥೆಯ ನಡೆ ಪ್ರಾಮಾಣಿಕತೆಯಿಂದ ಕೂಡಿದ್ದರೆ, ಅದರ ಎಲ್ಲ ವ್ಯವಹಾರಗಳಲ್ಲಿ ಪಾರದರ್ಶಕತೆ ಇದ್ದರೆ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿ ಶಿಸ್ತು–ದಕ್ಷತೆ ಮೂಡಿದರೆ, ಅದರಿಂದಾಗಬಹುದಾದ ಪರಿಣಾಮಗಳ ಅಗಾಧತೆ ಕುರಿತ ಅರಿವು ನಮ್ಮ ಆಡಳಿತಾರೂಢರಿಗೆ ಇಲ್ಲದೇ ಇರುವ ಕಾರಣಕ್ಕೆ ಅದರ ಮುಖಮೌಲ್ಯ ಪಾತಾಳಕ್ಕೆ ಕುಸಿದಿದೆ.

ಸುಶಿಕ್ಷಿತ ಯುವಪೀಳಿಗೆಯ ದೃಷ್ಟಿಯಿಂದ ಯೋಚಿಸಿದರೆ ಈ ಸಂಸ್ಥೆ ಬೀರಬಹುದಾದ ಪರಿಣಾಮ ಬಹುಮುಖಿಯಾದುದು. ಯುವಪೀಳಿಗೆಯ ಕನಸುಗಳಿಗೆ ರೆಕ್ಕೆ ಮೂಡಿಸುವ, ಅವರ ಆದರ್ಶಗಳಿಗೆ ನೀರೆರೆದು ಪೋಷಿಸುವ, ಓದಿನ ಅಭಿರುಚಿ ರೂಢಿಸುವ ಮತ್ತು ಅವರಲ್ಲಿ ಆತ್ಮವಿಶ್ವಾಸದ ಕಿಚ್ಚು ಹೊತ್ತಿಸಬಲ್ಲ ಶಕ್ತಿ ಈ ಸಂಸ್ಥೆಗಿದೆ. ದುರದೃಷ್ಟದ ಸಂಗತಿ ಎಂದರೆ ಇವು ಯಾವುದನ್ನೂ ಮಾಡುವ ಸ್ಥಿತಿಯಲ್ಲಿ ಅದು ಈಗ ಉಳಿದಿಲ್ಲ.

‘ತರುಣ ಕರ್ನಾಟಕ’ದ ದೀವಟಿಗೆ ಆಗಬಹುದಾಗಿದ್ದ ಸಂಸ್ಥೆಯು ಬಿಸಿರಕ್ತದ ಯುವಕ–ಯುವತಿಯರಲ್ಲಿ ಇರುವ ಆದರ್ಶಗಳನ್ನು, ಕನಸುಗಳನ್ನು ಕೊಲ್ಲುವ ಕೆಲಸ ಮಾಡುತ್ತಿದೆ. ‘ಕಾಸಿದ್ದರಷ್ಟೇ ಕೆಲಸ’ ಎಂಬಂತಹ ಸ್ಥಿತಿ, ಯುವ ಮನಸ್ಸುಗಳಿಗೆ ಎಂತಹ ಆಘಾತ ನೀಡಬಹುದು? ಓದುವ, ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವ ಅವರ ಉತ್ಸಾಹವನ್ನೇ ಉಡುಗಿಸುವುದಿಲ್ಲವೇ?

ಕೆಎಎಸ್ ಪರೀಕ್ಷೆಗಳನ್ನು ನಿಯಮಿತವಾಗಿ ನಡೆಸಲು ಸಾಧ್ಯವಾದರೆ, ಮೌಲ್ಯಮಾಪನ ಮತ್ತು ನೇಮಕಾತಿ ಪ್ರಕ್ರಿಯೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾದರೆ ಅದು ರವಾನಿಸುವ ಸಕಾರಾತ್ಮಕ ಸಂದೇಶದ ಪರಿಣಾಮಗಳೇ ಬೇರೆ ಬಗೆಯದಾಗಿರುತ್ತವೆ. ಇಂತಹದೊಂದು ಸಣ್ಣ ತಿಳಿವಾದರೂ ಆಳುವ ವರ್ಗಕ್ಕೆ ಇರುವುದು ಬೇಡವೇ? ಸಂವಿಧಾನದ ಯಾವ ವಿಧಿಗಳಡಿ ‘ಯುಪಿಎಸ್‌ಸಿ’ ರೂಪುಗೊಂಡಿದೆಯೋ ಅದೇ ವಿಧಿಗಳಡಿ ‘ಕೆಪಿಎಸ್‌ಸಿ’ ಕೂಡ ರೂಪು ತಳೆದಿದೆ. ಆದರೆ, ಸಾರ್ವಜನಿಕ ವರ್ಚಸ್ಸು, ಸೇವಾದಕ್ಷತೆಯಲ್ಲಿ ಎರಡರ ನಡುವೆ ಆಡಿಗೂ ಆನೆಗೂ ಇರುವ ಅಂತರ! ಕೆಪಿಎಸ್‌ಸಿಯನ್ನು ನೇರ್ಪುಗೊಳಿಸುವ ವಾಗ್ದಾನ ಈ ಕ್ಷಣದವರೆಗೂ ಒಣಮಾತಾಗಿಯೇ ಉಳಿದಿರುವುದು ಕರ್ನಾಟಕದ ಯುವಚೇತನಗಳ ಮಟ್ಟಿಗೆ ದುರದೃಷ್ಟದ ಸಂಗತಿ.

ಆಡಳಿತದ ಉನ್ನತ ಹುದ್ದೆಗಳಿಗೆ ನೇಮಕ ಮಾಡುವ ಸಂಸ್ಥೆಯೇ ಭ್ರಷ್ಟಕೂಪವಾಗಿ ಮಾರ್ಪಟ್ಟರೆ, ಹಣ–ಪ್ರಭಾವದಿಂದ ಹುದ್ದೆ ದಕ್ಕಿಸಿಕೊಂಡವರಿಂದ ಯಾವ ಬಗೆಯ ದಕ್ಷತೆ, ಪ್ರಾಮಾಣಿಕತೆಯನ್ನು ನಿರೀಕ್ಷಿಸಬಹುದು? ಜನಸಾಮಾನ್ಯರ ಆಶೋತ್ತರಗಳಿಗೆ ಅವರು ಯಾವ ಪರಿ ಸ್ಪಂದಿಸಬಹುದು! ಆಡಳಿತಕ್ಕೆ ಸರ್ಕಾರವೇ ಹಳ್ಳ ತೋಡುವುದೆಂದರೆ ಬಹುಶಃ ಇದೇ ಇರಬೇಕು.

ಇಪ್ಪತ್ತು ವರ್ಷಗಳ ಹಿಂದೆ, ಅಂದರೆ 1998ರಲ್ಲಿ ನಡೆದ ನೇಮಕಕ್ಕೆ ಸಂಬಂಧಿಸಿದ ತಗಾದೆ ಇನ್ನೂ ಇತ್ಯರ್ಥವಾಗಿಲ್ಲ. ಕೋರ್ಟ್ ಮೆಟ್ಟಿಲೇರಿ, ತೀರ್ಪುಗಳು ಹೊರಬಿದ್ದರೂ ಸೇವಾ ಅಭದ್ರತೆ ದೂರವಾಗಿಲ್ಲ. ಹೈಕೋರ್ಟ್ ತೀರ್ಪಿನಿಂದ ಹುದ್ದೆ ಕಳೆದುಕೊಳ್ಳುವ ಭೀತಿ ಎದುರಿಸುತ್ತಿರುವ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳಿಗೆ ಸೇವಾ ಭದ್ರತೆ ಒದಗಿಸುವುದಕ್ಕಾಗಿ ಹಾಗೂ ಹಿಂಬಡ್ತಿ ಭೀತಿ ಎದುರಿಸುತ್ತಿರುವ ಅಧಿಕಾರಿಗಳಿಗೆ ರಕ್ಷಣೆ ನೀಡುವುದಕ್ಕಾಗಿ ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರ ಈಗ ಮುಂದಾಗಿದೆ. ವಿಚಿತ್ರ ಎಂದರೆ, ಈ ನಿರ್ಧಾರದ ಬಗ್ಗೆಯೂ ಜನಪ್ರತಿನಿಧಿಗಳಿಂದ ಭಿನ್ನ ಧ್ವನಿಗಳು ಹೊರಬಿದ್ದಿವೆ. ಒಂದು ನೇಮಕದ ಪ್ರಶ್ನೆಯನ್ನು ಕೋರ್ಟ್, ಕಚೇರಿ, ಸಚಿವ ಸಂಪುಟ ಸಭೆ ಅಂತ ಎರಡು ದಶಕಗಳ ಕಾಲ ಎಳೆದಾಡುವಂತಹ ಸ್ಥಿತಿ ಒದಗಿದ್ದರೆ ಅದಕ್ಕೆ ಕಾರಣ ಯಾರು? ಅಂತಹ ಪರೀಕ್ಷೆ ಬಗ್ಗೆ ಯುವಪೀಳಿಗೆಯಲ್ಲಿ ವಿಶ್ವಾಸ ಉಳಿಯುವುದಾದರೂ ಹೇಗೆ? ಆ ನಂತರ ನಡೆದ ಕೆಎಎಸ್ ಪರೀಕ್ಷೆಗಳು ಸಹ ಅಕ್ರಮ ಆರೋಪಗಳಿಂದ ಹೊರತಾಗಿಲ್ಲ, ವಿವಾದಗಳಿಂದ ಮುಕ್ತವಾಗಿಲ್ಲ!

ಕೆಪಿಎಸ್‌ಸಿ ಶುದ್ಧೀಕರಣಕ್ಕಾಗಿ ಪಿ.ಸಿ. ಹೋಟಾ ನೇತೃತ್ವದಲ್ಲಿ ಒಂದು ಸಮಿತಿ ರಚನೆಯಾಗಿ, ಅದು ವರದಿಯನ್ನೂ ನೀಡಿತು. ಆದರೆ, ಆ ವರದಿ ಸಂಪೂರ್ಣವಾಗಿ ಅನುಷ್ಠಾನಕ್ಕೆ ಬರಲೇ ಇಲ್ಲ. ಆಳುವ ವರ್ಗದ ಆಲೋಚನಾಕ್ರಮ ನೆಟ್ಟಗಾದರೆ ಮಾತ್ರ ಇಂತಹ ಸಂಸ್ಥೆಗಳ ಕೊಳೆ ನಿವಾರಣೆಯಾಗಲು ಸಾಧ್ಯ. ಇಲ್ಲವಾದರೆ ರಾಜಕೀಯ ದಲ್ಲಾಳಿಗಳ ಆಡುಂಬೊಲವಾಗಿ ಉಳಿಯುತ್ತವೆ. ನಾಡು ಕಟ್ಟುವ ಕೆಲಸಕ್ಕೆ ಬೆನ್ನು ತಿರುಗಿಸಿ ನಿಲ್ಲುತ್ತವೆ.

**■ ಎನ್. ಉದಯಕುಮಾರ್**

‘ತರುಣ ಕರ್ನಾಟಕ’ದ ದೀವಟಿಗೆ ಆಗಬಹುದಾಗಿದ್ದ ‘ಕೆಪಿಎಸ್‌ಸಿ’ ಬಿಸಿರಕ್ತದ ಯುವಕ–ಯುವತಿಯರಲ್ಲಿ ಇರುವ ಆದರ್ಶಗಳನ್ನು, ಕನಸುಗಳನ್ನು ಕೊಲ್ಲುವ ಕೆಲಸ ಮಾಡುತ್ತಿದೆ. ‘ಕಾಸಿದ್ದರಷ್ಟೇ ಕೆಲಸ’ ಎಂಬಂತಹ ಸ್ಥಿತಿ, ಯುವ ಮನಸ್ಸುಗಳಿಗೆ ಎಂತಹ ಆಘಾತ ನೀಡಬಹುದು? ಓದುವ, ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವ ಅವರ ಉತ್ಸಾಹವನ್ನೇ ಉಡುಗಿಸುವುದಿಲ್ಲವೇ?